ಸಾಕ್ಷಿಗೆ ಕ್ರಮಬದ್ದವಾಗಿ ಪ್ರಮಾಣ ವಚನವನ್ನು ಬೋಧಿಸಲಾಯಿತು.

ಪಾಟೀ ಸವಾಲು ವಾದಿ ಪರ ವಕೀಲರಿಂದಃ-

1. ನಾನು ಎಸ್ ಎಸ್ ಎಲ್ ಸಿ ವರೆಗೆ ವಿದ್ಯಾಭ್ಯಾಸ ಮಾಡಿರುತ್ತೇನೆ. ನಾನು ಈಗ ವ್ಯವಸಾಯ ಮಾಡುತ್ತಿದ್ದೇನೆ. ನನಗೆ ವ್ಯವಸಾಯ ಬಿಟ್ಟು ಬೇರೆ ಆದಾಯದ ಮೂಲಗಳು ಇರುತ್ತವಾ ಎಂದರೆ ಇಲ್ಲ. ನಾನು ಜಾಲಮಂಗಲ ಗ್ರಾಮ ಪಂಚಾಯಿತಿ ಚುನಾವಣೆಯಲ್ಲಿ ನಾನು ವಿಜೇತನಾಗಿರುತ್ತೇನೆ ಎಂದರೆ ಹೌದು. ಸಾಕ್ಷಿ ಮುಂದುವರೆದು ನಾನು ಅಧ್ಯಕ್ಷರನಾಗಿ ವಿಜೇತನಾಗಿರುತ್ತೇನೆ ಎನ್ನುತ್ತಾರೆ. ನನ್ನ ಅಕ್ಕ ಪುಟ್ಟರೇವಮ್ಮ ವಿದ್ಯಾಭ್ಯಾಸ ಮಾಡಿರುತ್ತಾರಾ ಎಂದರೆ ನನಗೆ ಗೊತ್ತಿಲ್ಲ. ಉಳಿದ ವಾದಿಯರು ಸಹೋದರಿಯರು ಎಂದರೆ ನಿಜ. ಅವರು ವಿದ್ಯಾಭ್ಯಾಸ ಮಾಡಿರುತ್ತಾರಾ ಎಂದರೆ ಇಲ್ಲ. ನಾನು ಎಷ್ಟು ವರ್ಷಗಳಿಂದ ವ್ಯವಸಾಯ ಮಾಡುತ್ತಿದ್ದೇನೆ ಎಂದರೆ 25-30 ವರ್ಷಗಳಿಂದ. ನಾನು ಎಸ್ ಎಸ್ ಎಲ್ ಸಿ ವಿದ್ಯಾಭ್ಯಾಸ ಪೂರ್ಣಗೊಳಿಸಿರುತ್ತೇನೆ ಎಂದರೆ ಜ್ಞಾಪಕ ಇಲ್ಲ. ವ್ಯವಸಾಯದಿಂದ ನನಗೆ ವರ್ಷಕ್ಕೆ ಎಷ್ಟು ಆದಾಯ ಬರುತ್ತದೆ ಎಂದರೆ 10 ರಿಂದ 13 ಸಾವಿರ ಮಾತ್ರ ಬರುತ್ತಿದೆ.

2. ನಮ್ಮ ತಂದೆ ಭದ್ರಪ್ಪ ಯಾವಾಗ ತೀರಿಕೊಂಡಿರುತ್ತಾರೆ ಎಂದರೆ ನೆನಪಿಲ್ಲ. ಭದ್ರಪ್ಪನಿಗೆ ಎಷ್ಟು ಜನ ಸಹೋದರರು ಎಂದರೆ 5. ಅವರ ಹೆಸರುಗಳು ಭದ್ರಪ್ಪ ಮರಿನಿಂಗಪ್ಪ, ಈರಪ್ಪ. ಮಾರಪ್ಪ ಚಿಕ್ಕ ಪುಟ್ಟಯ್ಯ. ನಮ್ಮ ತಂದೆ ಜೀವಂತ ಇದ್ದಾಗ ಅವರ ಸಹೋದರರು ಸಹ ಒಟ್ಟು ಕುಟುಂಬದಲ್ಲಿ ವಾಸವಿದ್ದರು ಎಂದರೆ ಇಲ್ಲ. ಮರಿನಿಂಗಪ್ಪ, ಈರಪ್ಪ. ಮಾರಪ್ಪ ಚಿಕ್ಕ ಪುಟ್ಟಯ್ಯ ಎಲ್ಲರೂ ಪಿಚ್ಚಕುಂಟನಪಾಳ್ಯದಲ್ಲೇ ವಾಸವಿದ್ದರು ಎಂದರೆ ಹೌದು. ನಮ್ಮ ತಂದೆ ವಾಸವಿದ್ದ ಹಳೆಯ

ಮನೆಯಲ್ಲೆ ಅವರುಗಳು ಸಹ ವಾಸವಿದ್ದರು ಎಂದರೆ ಇಲ್ಲ, ಗೋಡೆ ನಿರ್ಮಿಸಿಕೊಂಡು ಪ್ರತ್ಯೇಕವಾಗಿ ವಾಸವಿದ್ದರು. ಆ ಹಳೆ ಮನೆಯ ವಿಸ್ತೀರ್ಣ ಹೇಳಲು ಬರುತ್ತದಾ ಎಂದರೆ ಇಲ್ಲ. ಈಗಲೂ ಸಹ ಆ ಹಳೆಯ ಮನೆಯಲ್ಲೇ ಮರಿನಿಂಗಪ್ಪ, ಈರಪ್ಪ. ಮಾರಪ್ಪ ಮತ್ತು ಚಿಕ್ಕ ಪುಟ್ಟಯ್ಯ ರವರುವಾಸವಿರುತ್ತಾರೆ ಎಂದರೆ ಇಲ್ಲ ಬೇರೆ ಮನೆಗಳಲ್ಲಿ ವಾಸವಿರುತ್ತಾರೆ.

3. ನಮ್ಮ ತಂದೆ ಜೀವಂತ ಇದ್ದಾಗ ನನ್ನ ಸಹೋದರಿಯರನ್ನು ತುಂಬಾ ಚೆನ್ನಾಗಿ ನೋಡಿಕೊಳ್ಳುತ್ತಿದ್ದರು ಎಂದರೆ ಹೌದು. ಅವರು ಸಹ ನಮ್ಮ ತಂದೆಯ ಬಳಿ ತುಂಬಾ ಪ್ರೀತಿ ವಿಶ್ವಾಸದಿಂದ ಇದ್ದರು ಎಂದರೆ ಇಲ್ಲ. ನಮ್ಮ ತಂದೆಯ ಆರೋಗ್ಯ ಏರುಪೇರಾದಾಗ ನನ್ನ ದೊಡ್ಡ ಅಕ್ಕ ಪುಟ್ಟರೇವಮ್ಮ ನೋಡಿಕೊಳ್ಳುತಿದ್ದರು ಎಂದರೆ ಇಲ್ಲ, ನಾನು ನೋಡಿಕೊಳ್ಳುತ್ತಿದ್ದರು. ನನ್ನನ್ನು ಮತ್ತು ನಮ್ಮ ತಂದೆಯ ಕಷ್ಟ ಸುಖಗಳಿಗೆ ನನ್ನ ಅಕ್ಕನೇ ಅವರ ಖರ್ಚಿನಿಂದ ನೋಡಿಕೊಂಡು ಭಾಗಿಯಾಗುತ್ತಿದ್ದರು ಎಂದರೆ ಸುಳ್ಳು. ನಾನು ಹೇಳಿದಂತೆ ವಾರ್ಷಿಕವಾಗಿ 13 ಸಾವಿರ ಬರುತ್ತಿದ್ದ ಕಾರಣ ಕುಟುಂಬ ಖರ್ಚು ವೆಚ್ಚ ಆದಾಯಕ್ಕಿಂತ ಹೆಚ್ಚಾಗುತ್ತಿತ್ತು ಎಂದರೆ ಹೌದು. ಅದೇ ಕಾರಣ ನಮ್ಮ ತಂದೆಯ ಆರೋಗ್ಯ ಸಮಸ್ಯೆಯನ್ನು ನನ್ನ ಅಕ್ಕ ನೋಡಿಕೊಳ್ಳುತಿದ್ದರು ಎಂದರೆ ಸುಳ್ಳು.

4. ನಮ್ಮ ತಾತನ ಹೆಸರು ಕೂರ್ಲಪ್ಪ. ಅವರು ತೀರಿಕೊಂಡು ಎಷ್ಟು ವರ್ಷಗಳು ಆಗಿರುತ್ತವೆ ಎಂದರೆ ನನಗೆ ನೆನಪಿಲ್ಲ. ನಮ್ಮ ತಾತ ಕೂರ್ಲಪ್ಪ 08.10.1982 ರಲ್ಲಿ ತೀರಿಕೊಂಡಿರುತ್ತಾರೆ ಎಂದು ನಾನು ನನ್ನ ಮುಖ್ಯ ವಿಚಾರಣೆಯಲ್ಲಿ ಹೇಳಿರುತ್ತೇನೆ ಎಂದರೆ ಹೌದು. ನಮ್ಮ

ತಾತನಿಗೆ ಎಷ್ಟು ಜನ ಸಹೋದರರು ಇದ್ದರು ಎಂದರೆ ನನಗೆ ಜ್ಞಾಪಕ ಇಲ್ಲ. ನಮ್ಮ ತಾತನಿಗೆ ಕಂತಿನಮಾರಯ್ಯ ಎಂಬ ಸಹೋದರ ಇದ್ದರು ಎಂದರೆ ಹೌದು. ಕೂರ್ಲಪ್ಪನಿಗೆ ಮತ್ತು ಕಂತಿನಮಾರಯ್ಯನಿಗೆ ಪಿತ್ರಾರ್ಜಿತವಾಗಿ ಎಷ್ಟು ಸ್ವತ್ತುಗಳು ಬಂದಿದ್ದವು ಎಂದರೆ ನನಂಗೆ ಗೊತ್ತಿಲ್ಲ. ನಮ್ಮ ತಾತ ಕೂರ್ಲಪ್ಪನಿಗೆ ಶಾನುಮಂಗಲ ಗ್ರಾಮದ ಸರ್ವೇ ನಂಬರ್ 90/1 ರಲಿಲ 1 ಎಕರೆ, ಸರ್ವೇ ನಂಬರ್ 94/1 ರಲ್ಲಿ 37 ಗುಂಟೆ ಜಮೀನು, ಸರ್ವೇ ನಂಬರ್ 43/3 ರಲ್ಲಿ 33 ಗುಂಟೆ ಜಮೀನು, ಸರ್ವೇ ನಂಬರ್ 91/1 ರಲ್ಲಿ 1 ಎಕರೆ 20 ಗುಂಟೆ, ಸರ್ವೇ ನಂಬರ್ 160/6 ರಲ್ಲಿ ಗುಂಟೆ ಜಮೀನು, ಸರ್ವೇ ನಂಬರ್ 150/2 ರಲ್ಲಿ 4 ಗುಂಟೆ, ಸರ್ವೇ ನಂಬರ್ 88/2 ರಲ್ಲಿ 2 ಎಕರೆ 8 ವರೆ ಗುಂಟೆ ಜಮೀನು, ಶಾನುಮಂಗಲ ಗ್ರಾಮದ ಸರ್ವೇ ನಂಬರ್ 153 ರಲ್ಲಿ 18 ಗುಂಟೆ ಜಮೀನು, ತಾಳಗುಪ್ಪೆ ಗ್ರಾಮದ ಸರ್ವೇ ನಂಬರ್ 55 ರಲ್ಲಿ 2 ಎಕರೆ ಜಮೀನುಗಳು ಪಿತ್ರಾರ್ಜಿತ ವಾಗಿ ಬಂದಿದ್ದವು ಎಂದರೆ ಇಲ್ಲ, ಅವುಗಳನ್ನು ಸ್ವಯಾರ್ಜಿತವಾಗಿ ಸಂಪಾದನೆ ಮಾಡಿರುತ್ತಾರೆ. ಮೇಲೆ ಹೇಳಿದ ಸರ್ವೇ ನಂಬರ್ ಸ್ವತ್ತುಗಳು ಈಗ ಯಾರ ಹೆಸರಿಗೆ ಬರುತ್ತಿವೆ ಎಂದರೆ ನಮ್ಮ ತಂದೆಯ ಹೆಸರಿನಲ್ಲಿ ಬರುತ್ತಿದೆ ಎಂದರೆ ಹೌದು. ಕೂರ್ಲಪ್ಪನಿಗೆ ನಮ್ಮ ತಂದೆಯೇ ಹಿರಿಯ ಮಗ ಎಂದರೆ ಹೌದು. ಕೂರ್ಲಪ್ಪ ತೀರಿಕೊಂಡ ನಂತರ ನಮ್ಮ ತಂದೆಯ ಹೆಸರಿಗೆ ಖಾತೆ ಮುಂದುವರೆಯುತ್ತಿದೆ ಎಂದರೆ ಹೌದು. ಮೇಲೆ ಹೇಳಿದ ಸರ್ವೇ ನಂಬರ್ ಸ್ವತ್ತುಗಳನ್ನು ಕೂರ್ಲಪ್ಪನ ಮಕ್ಕಳು ಯಾವುದೇ ರೀತಿ ಭಾಗ ಮಾಡಿಕೊಂಡಿಲ್ಲ ಎಂದರೆ ಹೌದು. ದಾವಾ ಸ್ವತ್ತುಗಳು ಒಟ್ಟು ಕುಟುಂಬದ ಸ್ವತ್ತುಗಳು ಎಂದರೆ ಇಲ್ಲ. ನನ್ನ ಜನನ ದಿನಾಂಕ ನೆನಪಿರುತ್ತದಾ ಎಂದರೆ ಇಲ್ಲ. ನಮ್ಮ ತಂದೆ ಜೀವನಕ್ಕಾಗಿ ಏನು ವೃತ್ತಿ ಮಾಡುತ್ತಿದ್ದರು ಎಂದರೆ ವ್ಯವಸಾಯ. ವ್ಯವಸಾಯ ಬಿಟ್ಟು ಬೇರೆ

ವ್ಯವಹಾರ ಮಾಡುತ್ತಿದ್ದರಾ ಎಂದರೆ ಇಲ್ಲ. ಯಾವ ಜಮೀನಿನಲ್ಲಿ ನಮ್ಮ ತಂದೆ ವ್ಯವಸಾಯ ಮಾಡುತ್ತಿದ್ದರು ಎಂದರೆ ಎಲ್ಲಾ ಒಟ್ಟಿಗೆ ಸೇರಿ ವ್ಯವಸಾಯ ಮಾಡುತ್ತಿದ್ದರು. ನಮ್ಮ ತಂದೆಗೆ ವ್ಯವಸಾಯದಿಂದ ವಾರ್ಷಿಕವಾಗಿ ಎಷ್ಟು ಆದಾಯ ಬರುತ್ತಿತ್ತು ಎಂದರೆ ನನಗೆ ಗೊತ್ತಿಲ್ಲ.

5. ನಮ್ಮ ತಂದೆ ಒಟ್ಟು ಕುಟುಂಬದಲ್ಲಿ ಇದ್ದಾಗ 1986 ಮತ್ತು 1987 ರಲ್ಲಿ ಶಂಕರಮ್ಮನಿಂದ ಸರ್ವೇ ನಂಬರ್ 88 ರಲ್ಲಿ 2 ವರೆ ಎಕರೆ ಜಮೀನು ಮತ್ತು ಗೋವಿಂದಯ್ಯ ಮತ್ತು ದಾಸಪ್ಪರವರಿಂದ ಸರ್ವೇ ನಂಬರ್ 92 ರಲ್ಲಿ ತಲಾ 1 ಎಕಲರೆ 5 ಗುಂಟೆ ಗುಂಟೆ ಜಮೀನನ್ನು ಒಟ್ಟು ಕುಟುಂಬದ ಪರವಾಗಿ ನಮ್ಮ ತಂದೆಯ ಹೆಸರಿಗೆ ಕ್ರಯ ಪತ್ರ ವಾಗಿರುತ್ತದೆ ಎಂದರೆ ಸರಿಯಲ್ಲ. ದಾಸಯ್ಯ ನಮಗೆ ಸಂಬಂಧಿಕರು ಎಂದರೆ ಸರಿಯಲ್ಲ ಗೋವಿಂದಯ್ಯ ಪುಟ್ಟೇಗೌಡರ ಮಕ್ಕಳು ಎಂದರೆ ಸರಿಯಲ್ಲ. ಪುಟ್ಟೇಗೌಡರು ಕಂತಿಮಾರಯ್ಯನ ಮಕ್ಕಳು ಎಂದರೆ ಸುಳ್ಳು. ಕಂತಿಮಾರಯ್ಯ ಯಾವಾಗ ತೀರಿಕೊಂಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಕಂತಿಮಾರಯ್ಯ ಮತ್ತು ಅವರ ಕೂರ್ಲಪ್ಪನವರು ಅವರ ಪಿತ್ರಾರ್ಜಿತ ಸ್ವತ್ತುಗಳಲ್ಲಿ ಸಮಭಾಗವಾಗಿತ್ತು ಎಂದರೆ ಸುಳ್ಳು.

6. ನಮ್ಮ ತಂದೆ ಮತ್ತು ಅವರ ಸಹೋದರರು ಒಟ್ಟು ಕುಟುಂಬದಲ್ಲಿ ಇದ್ದಾಗ ಸರ್ವೇ ನಂಬರ್ 53 ರಲ್ಲಿ 4 ಎಕರೆ 25 ಗುಂಟೆ ಜಮೀನನ್ನು ಒಟ್ಟು ಕುಟುಂಬದ ಪರವಾಗಿ ನಮ್ಮ ಮರಿನಿಂಗಪ್ಪ ಹೆಸರಿನಲ್ಲಿ ಖರೀದಿಸಿರುತ್ತಾರೆ ಎಂದರೆ ಸುಳ್ಳು. ಸರ್ವೇ ನಂಬರ್ 53 ರ ಸ್ವತ್ತಿನ ಚಕ್ಕಂದಿ ಹೇಳಲು ಬರುತ್ತದಾ ಎಂದರೆ ಇಲ್ಲ. ಮರಿಈರಪ್ಪ ಹೆಸರಿನಲ್ಲಿ ಸದರಿ ಸ್ವತ್ತಿನ ಖಾತೆ ಮುಂದುವರೆಯುತ್ತಿದೆ ಎಂದರೆ ಸರಿಯಲ್ಲ. ನಮ್ಮ ತಂದೆ ಮತ್ತು ಅವರ ಸಹೋದರರು ವ್ಯವಸಾಯ

ಬಿಟ್ಟು ಮರಳು ತುಂಬವ ಕೆಲಸ ಮಾಡುತ್ತಿದ್ದರು ಎಂದರೆ ಭದ್ರಪ್ಪ ಮತ್ತು ಮರಿಈರಪ್ಪ ಮಾತ್ರ ಮಾಡುತ್ತಿದ್ದರು. ನಮ್ಮ ತಂದೆ ಮತ್ತು ಅವರ ಸಹೋದರರು ಒಟ್ಟು ಕುಟುಂಬದಲ್ಲಿ ಇದ್ದಾಗ ಸರ್ವೇ ನಂಬರ್ 53 ರ ಸ್ವತ್ತನ್ನು ಖರೀದಿಸಿರುತ್ತಾರಾ ಎಂದರೆ ಇಲ್ಲ.

ಈ ಹಂತದಲ್ಲಿ ಮುಂದುವರೆದ ಪಾಟೀ ಸವಾಲಿಗೆ ಸಮಯ ಕೋರಿದ ಕಾರಣ ಮುಂದೂಡಲಾಯಿತು.

(ಸಾಕ್ಷಿಯು ಕೊಟ್ಟ ಸಾಕ್ಷ್ಯವನ್ನು ಬಹಿರಂಗ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಗಣಕೀಕರಿಸಿದೆ)
(ಸಾಕ್ಷಿಗೆ ಸಾಕ್ಷ್ಯವನ್ನು ಓದಿ ಕೇಳಿ ಸರಿ ಇದೆ ಎಂದು ಒಪ್ಪಿದ್ದಾರೆ)

(ಎನ್ ಎಸ್ ಕುಲಕರ್ಣಿ)
ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು,
ರಾಮನಗರ.